# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಕರ್ನಾಟಕ ವಿಧಾನ ಪರಿಷತ್ತು ಸದಸ್ಯರ ಹೆಸರು : | : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಸಂಖ್ಯೆ: | : 749(618) |
| ಉತ್ತರಿಸ ಬೇಕಾದ ದಿನಾಂಕ | : 12/12/2025 |
| ಉತ್ತರಿಸುವವರು | : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

<table>
<tr><th>ಕ್ರ ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ)</td><td>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ತ್ರಿಸ್ತರದ ಸ್ಥಳೀಯ ಸಂಸ್ಥೆಗಳಲ್ಲಿ ಎಷ್ಟು ಸಂಖ್ಯೆಯ ಲೆಕ್ಕಪರಿಶೋಧನೆಗಳು ಪ್ರಸ್ತುತವಾಗಿ ಜಾರಿಯಲ್ಲಿವೆ.</td><td>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ತ್ರಿಸ್ತರದ ಸ್ಥಳೀಯ ಸಂಸ್ಥೆಗಳಲ್ಲಿ ಈ ಕೆಳಕಂಡ ಲೆಕ್ಕಪರಿಶೋಧನೆಗಳು ಜಾರಿಯಲ್ಲಿವೆ.
<table>
<tr><th>ಕ್ರ.ಸಂ</th><th>ಲೆಕ್ಕ ಪರಿಶೋಧನೆಯ ವಿಧಗಳು</th></tr>
<tr><td>1</td><td>ಗ್ರಾಮ ಪಂಚಾಯತ್ ವಾರ್ಷಿಕ ಲೆಕ್ಕಪತ್ರಗಳ ಆಡಿಟ್ (ಶಾಸನಬದ್ಧ)</td></tr>
<tr><td>2</td><td>ಸಾಮಾಜಿಕ ಲೆಕ್ಕ ಪರಿಶೋಧನೆ</td></tr>
<tr><td>3</td><td>ಜಮಾಬಂಧಿ</td></tr>
<tr><td>4</td><td>ಮಹಾಲೇಖಪಾಲರ ಲೆಕ್ಕಪರಿಶೋಧನೆ (ಟೆಸ್ಟ್ಆಡಿಟ್/ಟೆಕ್ನಿಕಲ್ಆಡಿಟ್/ಸ್ಪೆಷಲ್ ಆಡಿಟ್).</td></tr>
<tr><td>5</td><td>ವಿಶೇಷ ಲೆಕ್ಕಪರಿಶೋಧನೆ.</td></tr>
<tr><td>6</td><td>ಜಿಲ್ಲಾ ಪಂಚಾಯತಿಯ ವತಿಯಿಂದ ಆಂತರಿಕ ಲೆಕ್ಕಪರಿಶೋಧನೆ.</td></tr>
</table>
</td></tr>
<tr><td>ಆ)</td><td>ಲೆಕ್ಕ ಪರಿಶೋಧನೆ ಪ್ರಕ್ರಿಯೆಯನ್ನು ನಿರ್ವಹಿಸುವ ಏಜೆನ್ಸಿಗಳು ಯಾವುವು ಈ ಲೆಕ್ಕ ಪರಿಶೋಧನಾ ಸಂಸ್ಥೆಗಳು ಅನುಸರಿಸುತ್ತಿರುವ ನಿಯಮಗಳು ಯಾವುವು:ಅವುಗಳನ್ನು ಆಡಳಿತ ಸರಳೀಕರಣದ ಹಿನ್ನೆಲೆಯಲ್ಲಿ ಏಕರೂಪವಾಗಿ ಮಾರ್ಪಾಡಿಸಲು ಇರುವ ತೊಂದರೆಗಳೇನು:</td><td>
<table>
<tr><th>ಕ್ರ. ಸಂ</th><th>ಲೆಕ್ಕಪರಿಶೋಧನೆಯ ವಿಧಗಳು</th><th>ಲೆಕ್ಕಪರಿಶೋಧನೆ ನಿರ್ವಹಿಸುವ ಏಜೆನ್ಸಿಗಳು</th><th>ಲೆಕ್ಕಪರಿಶೋಧನಾ ಸಂಸ್ಥೆಗಳು ಅನುಸರಿಸುತ್ತಿರುವ ನಿಯಮಗಳು</th></tr>
<tr><td>1</td><td>ಗ್ರಾಮ ಪಂಚಾಯತ್ ವಾರ್ಷಿಕ ಲೆಕ್ಕಪತ್ರಗಳ ಆಡಿಟ್ (ಶಾಸನಬದ್ಧ)</td><td>ಕರ್ನಾಟಕ ಲೆಕ್ಕಪರಿಶೋಧನಾ ಮತ್ತು ಲೆಕ್ಕಪತ್ರ ಇಲಾಖೆ</td><td>ಕರ್ನಾಟಕ ಗ್ರಾಮ ಪಂಚಾಯತ್ ಕಾಯ್ದೆ 1993ರ ಕ.ಪಂ.ರಾ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು,2006ರ ಪ್ರಕರಣ 246 ನಿಯಮ 112(1) ರಂತೆ ಕಾರ್ಯನಿರ್ವಹಿಸುತ್ತದೆ.</td></tr>
<tr><td>2</td><td>ಸಾಮಾಜಿಕ ಲೆಕ್ಕಪರಿಶೋಧನೆ</td><td>ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮಿಣ ಉದ್ಯೋಗ ಖಾತರಿ ಸಂಸ್ಥೆ</td><td>ಭಾರತ ಸರ್ಕಾರದ ರಾಜ್ಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 2005 ಪ್ರಕರಣ 17 ರಂತೆ ಕಾರ್ಯನಿರ್ವಹಿಸುತ್ತದೆ.</td></tr>
<tr><td>3</td><td>ಜಮಾಬಂಧಿ</td><td>ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್</td><td>ಕರ್ನಾಟಕ ಪಂಚಾಯತ್ ರಾಜ್ (ಪಂಚಾಯತ್ ಜಮಾಬಂಧಿ ನಿರ್ವಹಣೆ)ನಿಯಮ 2004ರ ನಿಯಮ 03 ರಿಂದ 12 ರಂತೆ ಕಾರ್ಯನಿರ್ವಹಿಸುತ್ತದೆ.</td></tr>
<tr><td>4</td><td>ಮಹಾಲೇಖಪಾಲರ ಲೆಕ್ಕಪರಿಶೋಧನೆ (ಟೆಸ್ಟ್ ಆಡಿಟ್)</td><td>ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೇಖಪರಿಶೋಧಕರು</td><td>ಸಿಎಜಿ (ಡಿಸಿಪಿ)ಕಾಯ್ದೆ 1971 ಸೆಕ್ಷನ್ 24 ಅಡಿಯಲ್ಲಿ ಹೊರಡಿಸಲಾದ ಆಡಿಟ್ ನಿಯಮ ದಂತೆ ಕಾರ್ಯನಿರ್ವಹಿಸುತ್ತದೆ.</td></tr>
</table>
</td></tr>
</table>

| | | | |
|---|---|---|---|
| 5 | ವಿಶೇಷ ಲೆಕ್ಕಪರಿಶೋಧನೆ | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಇಲಾಖೆ (KSAAD) | ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006ರ ನಿಯಮ 111 ಕಾರ್ಯನಿರ್ವಹಿಸುತ್ತದೆ. |
| 6 | ಜಿಲ್ಲಾ ಪಂಚಾಯತಿಯ ವತಿಯಿಂದ ಆಂತರಿಕಲೆಕ್ಕಪರಿಶೋಧನೆ. | ಮುಖ್ಯಲೆಕ್ಕಾಧಿಕಾರಿ ಜಿಲ್ಲಾ ಪಂಚಾಯತಿ | ಕರ್ನಾಟಕ ಜಿಲ್ಲಾ ಪಂಚಾಯತಿಗಳ (ಹಣಕಾಸು ಮತ್ತು ಲೆಕ್ಕಗಳ) ನಿಯಮಗಳು 1996 ರ 16ನೇ ಅಧ್ಯಾಯ, ನಿಯಮ 62(2)ರಂತೆ ಕಾರ್ಯನಿರ್ವಹಿಸುತ್ತದೆ. |

ಲೆಕ್ಕ ಪರಿಶೋಧನಾ ಸಂಸ್ಥೆಗಳು ಅನುಸರಿಸುತ್ತಿರುವ ನಿಯಮಗಳು ಏಕರೂಪವಾಗಿರುವುದಿಲ್ಲ.

| | | |
|---|---|---|
| ಇ) | ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಅದರಲ್ಲೂ ಗ್ರಾಮ ಪಂಚಾಯಿತಿಗಳಲ್ಲಿ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಎಜಿ ಆಡಿಟ್. ಗ್ರಾಮ ಸಭೆ, ಜಮಾಬಂದಿ, ಮತ್ತು ಸಾಮಾಜಿಕ ಪರಿಶೋಧನೆ, ಟೆಸ್ಟ್ ಅಡಿಟ್, ಕ್ರಾಸ್ ಅಡಿಟ್ ಮೂಲಕ ಲೆಕ್ಕತಪಾಸಣೆ ಮಾಡುತ್ತಿದ್ದು ಈ ಎಲ್ಲಾ ಸಂಸ್ಥೆಗಳಿಂದ ನಡೆಸಲ್ಪಡುವ ಲೆಕ್ಕ ತಪಾಸಣೆ ಪ್ರತ್ಯೇಕವಾಗಿದ್ದು ಇಷ್ಟು ಸಂಖ್ಯೆ ಲೆಕ್ಕ ತಪಾಸಣೆ ಅಗತ್ಯವಿದೆಯೇ: | ಹೌದು ಮೇಲ್ಕಂಡ ನಿಯಮಗಳನ್ವಯ ಪ್ರತ್ಯೇಕವಾಗಿ ತಪಾಸಣೆ ಅಗತ್ಯವಿರುತ್ತದೆ. |
| ಈ) | ಗ್ರಾಮ ಪಂಚಾಯತಿಗಳ ಲೆಕ್ಕ ತಪಾಸಣೆ ಸರಳಿಕರಿಸಲು ಮತ್ತು ಪ್ರಮಾಣೀಕೃತ ಕಾರ್ಯವಿಧಾನ(ಎಸ್ ಒ ಪಿ) ಜಾರಿಗೋಳಿಸಲು ಸರಕಾರದ ಕ್ರಮಗಳೇನು (ವಿವರ ನೀಡುವುದು). | ಎಲ್ಲಾ ವಿಧಗಳ ಲೆಕ್ಕಪರಿಶೋಧನೆಗಳನ್ನು ಸರ್ಕಾರದ ವಿಭಿನ್ನ ನಿಬಂಧನೆಗಳಡಿ ನಿಗದಿಪಡಿಸಿರುವಂತೆ ಜಾರಿಗೊಳಿಸಿ ನಿರ್ವಹಿಸುತ್ತಿರುವುದರಿಂದ ಇವುಗಳ ಕಾರ್ಯವಿಧಾನ ವಿಭಿನ್ನವಾಗಿರುತ್ತದೆ. |
| ಉ) | ಪಂಚಾಯತ್ ಸಂಸ್ಥೆಗಳ ಲೆಕ್ಕಪತ್ರಗಳನ್ನು ಒಂದು ಲೆಕ್ಕಪರಿಶೋಧನಾ ಪ್ರಾಧಿಕಾರವು ಲೆಕ್ಕಪರಿಶೋಧನೆಯನ್ನು ಮಾಡಿದ ನಂತರ ಸದರಿ ವರದಿಯನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಸಲ್ಲಿಸಿದ ನಂತರ ಆ ಲೆಕ್ಕಪತ್ರ ವರದಿಯನ್ನು ಬದಲಾಯಿಸುವ ಅಥವಾ ತಿದ್ದುಪಡಿ ಮಾಡುವ ಅವಕಾಶ ಇದೆಯೇ ? | ಅವಕಾಶವಿರುವುದಿಲ್ಲ. |

ಸಂಖ್ಯೆ: ಗ್ರಾಅಪ/749(618) ಎಲ್‌ಎಕ್ಯೂ/2025

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು